## ಅದೆಲ್ಲ ನಿಮಗ್ಯಾಕೆ?

ನ್ಯಾಯಾಧೀಶರ ಮುಂದೆ ಸರಕಾರಿ ವಕೀಲರು ಕಳ್ಳನ ವಿಚಾರಣೆ ಮಾಡುತ್ತ, ಅಷ್ಟೊಂದು ಭದ್ರತಾ ವ್ಯವಸ್ಥೆಯಿದ್ದ ಚಿನ್ನದ ಅಂಗಡಿಗೆ ಲೀಲಾಜಾಲವಾಗಿ ನುಗ್ಗಿ ಬೆರಳಚ್ಚು ಮೂಡದ ಹಾಗೆ ಅಷ್ಟು ವಜ್ರಾಭರಣಗಳನ್ನು ಹೇಗೆ ಕದ್ದೆ? ಎಂದು ಪ್ರಶ್ನಿಸಿದರು. ಕಳ್ಳ, 'ಬೇಡ ಬಿಡಿ ಸಾರ್' ಎಂದ. ವಕೀಲರು ಬಿಡದೆ, 'ಇಲ್ಲ, ಎಲ್ಲವನ್ನು ಸ್ಪಷ್ಟವಾಗಿ ಹೇಳು. ನಿನಗೆ ಶಿಕ್ಷೆ ಕಡಿಮೆಯಾಗುತ್ತದೆ. ಅಷ್ಟು ಗಟ್ಟಿಯಾದ ಗೋಡೆಗೆ ಸಲೀಸಾಗಿ ಕನ್ನ ಕೊರೆದುದಾದರೂ ಹೇಗೆ? ನನಗೆ ಗೊತ್ತಾಗಬೇಕು' ಎಂದು ಕೇಳಿದರು. 'ಸರ್, ನಿಮಗೆ ಒಳ್ಳೆಯ ನೌಕರಿ ಇದೆ. ವೇತನವೂ ಇದೆ, ಗೌರವವೂ ಇದೆ. ವಯಸ್ಸೂ ಆಗಿದೆ. ಇಂಥದ್ದರಲ್ಲಿ ಇದನ್ನು ಕಲಿತುಕೊಂಡು ಏನು ಮಾಡ್ತೀರಾ? ಹೋಗಲಿ ಬಿಡಿ ಸಾರ್' ಅಂದ ಕಳ್ಳ.

**ಪ. ರಾಮಕೃಷ್ಣ ಶಾಸ್ತ್ರಿ**



## ಸ್ನಾನದ ಸೌಲಭ್ಯ

ರಮೇಶ ಹಂಪಿ ಪ್ರವಾಸಕ್ಕೆ ಹೊರಡಲು ನಿಶ್ಚಯಿಸಿ ಖಾಸಗಿ ಸಾರಿಗೆ ಸಂಸ್ಥೆಯೊಂದನ್ನು ಸಂಪರ್ಕಿಸಿದ.



ಕಲೆ: ಗಣೇಶ ಆಚಾರ್ಯ

ಅವರು, 'ಹಂಪಿ, ಹೊಯ್ಸಳ ದೇವಾಲಯಗಳ ಮೂರು ದಿನಗಳ ಯಾತ್ರೆಗೆ ಮೂರು ಸಾವಿರ ರೂಪಾಯಿ. ಕಾಫಿ, ತಿಂಡಿ, ಊಟ, ವಸತಿ, ಬಿಸಿ ನೀರಿನ ಸ್ನಾನದ ಸೌಲಭ್ಯವೂ ಸೇರಿ' ಎಂದು ತಿಳಿಸಿದರು. ಅವನು ಚೌಕಾಶಿ ಮಾಡಿ, 'ಸಾರ್, ದಯವಿಟ್ಟು ಸ್ವಲ್ಪ ಕಡಿಮೆ ಮಾಡಿಕೊಳ್ಳಿ' ಎಂದ. ಮ್ಯಾನೇಜರ್, 'ಅದೆಲ್ಲಾ ಆಗೊಲ್ಲಾರೀ! ಈಗಾಗಲೇ ಸಾಕಷ್ಟು ರಿಯಾಯಿತಿ ಕೊಟ್ಟಾಗಿದೆ. ಬೇಕಾದರೆ ಬನ್ನಿ. ಇಲ್ಲವಾದರೆ ಬಿಡಿ. ಒಂದು ರೂಪಾಯಿನೂ ಕಡಿಮೆ ಮಾಡಲ್ಲ' ಎಂದ. ರಮೇಶ, 'ಸಾರ್ ನೀವು ಬಿಸಿ ನೀರಿನ ಸ್ನಾನದ ಸೌಲಭ್ಯವೂ ಸೇರಿ ಮೂರು ಸಾವಿರ ರೂಪಾಯಿ ಅಂತ ಹೇಳಿದ್ರಿ ಅಲ್ವಾ? ನನಗೆ ಆ ಸೌಲಭ್ಯ ಬೇಡ ಸರ್. ನಾನು ವಾರಕ್ಕೆ ಒಂದೇ ಸಲ ಸ್ನಾನ ಮಾಡೋದು... ಒಂದು ಸಾವಿರ ರೂಪಾಯಿ ಕಡಿಮೆ ಮಾಡ್ಕೊಳ್ಳಿ' ಎಂದ.

**ಎಂ.ಕೆ.ಮಂಜುನಾಥ್**